

ಅರುಣ ಪಿ. ಭಟ್ಟ

## ವಾರಭವಿಷ್ಯ: 30.11.2023ರಿಂದ 06.12.2023ರವರೆಗೆ




ಹಣಕಾಸಿನ ಹರಿವು ಹೆಚ್ಚಿಸಿಕೊಳ್ಳಲು ಹೊಸ ಆಯ್ಕೆಗಳು ಗೋಚರವಾಗುತ್ತವೆ. ವೈಯಕ್ತಿಕ ಬದುಕಿನಲ್ಲಿ ಸಕಾರಾತ್ಮಕ ಬದಲಾವಣೆಗಳು ಕಾಣಿಸಿಕೊಳ್ಳುತ್ತವೆ. ಪ್ರತಿಸ್ಪರ್ಧಿಗಳ ವಿರುದ್ಧ ನಿಮ್ಮ ಕೈ ಮೇಲಾಗಲಿದೆ. ಆರೋಗ್ಯದಲ್ಲಿ ಸ್ವಲ್ಪ ಮಟ್ಟಿಗೆ ಏರುಪೇರಾಗಬಹುದು. ಸಾಮಾಜಿಕವಾಗಿ ಗೌರವ ಮನ್ನಣೆಗೆ ಪಾತ್ರರಾಗಲಿದ್ದೀರಿ. ವಾರಾಂತ್ಯಕ್ಕೆ ಶುಭ ಸುದ್ದಿ ಕೇಳಲಿದ್ದೀರಿ. ಶುಭದಿನ 05. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ವೃತ್ತಿಪರರಿಗೆ ಉತ್ತಮವಾದ ಸಮಯ ಇದು. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುತ್ತಿರುವವರಿಗೆ ಯಶಸ್ಸು ದೊರೆಯಲಿದೆ. ಅಧಿಕಾರದಲ್ಲಿ ಇರುವವರು ನಿಮ್ಮ ಶ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಲಿದ್ದಾರೆ. ಪೋಷಕರು ನಿಮ್ಮ ಪ್ರಗತಿಯಿಂದಾಗಿ ಬಹಳ ಸಂತೋಷ ಪಡಲಿದ್ದಾರೆ. ದೀರ್ಘ ಕಾಲದಿಂದ ಇರುವ ಆರೋಗ್ಯ ಸಮಸ್ಯೆಗಳಿಂದ ಮುಕ್ತಿ ದೊರೆಯಲಿದೆ. ಶುಭದಿನ 04. ಗಣಪತಿ ಸುಬ್ರಹ್ಮಣ್ಯ ಜಪ ಮಾಡಿರಿ.




ಉದ್ಯೋಗ ಹುಡುಕುತ್ತಿರುವವರಿಗೆ ಶುಭ ಸುದ್ದಿ ಕೇಳುವ ಯೋಗ ಇದೆ. ಸ್ಪರ್ಧೆ, ಕ್ರೀಡೆಗಳಲ್ಲಿ ಯಶಸ್ಸು ದೊರೆಯಲಿದೆ. ಸಾಮಾಜಿಕ ಜೀವನದಲ್ಲಿ ಸಕ್ರಿಯರಾಗಿ ತೊಡಗಿಕೊಳ್ಳಲಿದ್ದೀರಿ. ಸೋದರ ಸೋದರಿಯರ ಜತೆಗೆ ಒತ್ತಡದ ಸನ್ನಿವೇಶಗಳನ್ನು ಎದುರಿಸಬೇಕಾಗುತ್ತದೆ. ಈವರೆಗೆ ಗೊಂದಲ ಹುಟ್ಟುಹಾಕಿದ್ದ ವಿಚಾರಗಳಿಗೆ ಪರಿಹಾರ ದೊರೆಯಲಿದೆ. ಶುಭದಿನ 03. ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ.




ಕಾನೂನು ವ್ಯಾಜ್ಯಗಳಿದ್ದಲ್ಲಿ ಜಯ ಪಡೆಯುವ ಅವಕಾಶ ಇದೆ. ಪ್ರತಿಸ್ಪರ್ಧಿಗಳ ವಿರುದ್ಧ ನಿಮ್ಮ ಕೈ ಮೇಲಾಗಲಿದೆ. ಉದ್ಯೋಗ ಸ್ಥಳದಲ್ಲಿ ಬಹಳ ಮುಖ್ಯವಾದ ಜವಾಬ್ದಾರಿಯನ್ನು ನಿಮಗೆ ವಹಿಸಲಾಗುವುದು. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದೀರಿ. ಸಾಮಾಜಿಕವಾಗಿ ನಿಮ್ಮ ಶ್ರಮ ಹಾಗೂ ದುಡಿಮೆಗೆ ಮೆಚ್ಚುಗೆ, ಮನ್ನಣೆ ದೊರೆಯಲಿದೆ. ಶುಭದಿನ 02. ಕಾಲ ಭೈರವನ ಸೇವೆ ಮಾಡಿರಿ.




ಈ ವಾರ ಉಲ್ಲಸಿತವಾಗಿ ಸಮಯ ಕಳೆಯಲಿದೆ. ವೈವಾಹಿಕ ಜೀವನವು ಸಂತೋಷದಾಯಕವಾಗಿ ಇರುತ್ತದೆ. ದೂರ ಪ್ರಯಾಣ ಮಾಡಬೇಕಾಗುತ್ತದೆ. ವಿದೇಶದಲ್ಲೇ ನೆಲೆಯಾಗಬೇಕು ಎಂದು ಪ್ರಯತ್ನ ಮಾಡುತ್ತಿರುವವರಿಗೆ ವಿವಿಧ ಪ್ರಕ್ರಿಯೆಗಳು ಸರಾಗವಾಗಿ ಪೂರ್ಣಗೊಳ್ಳಲಿವೆ. ವಾರದ ಅಂತ್ಯದಲ್ಲಿ ಆರೋಗ್ಯದಲ್ಲಿ ಸ್ವಲ್ಪಮಟ್ಟಿಗೆ ಏರುಪೇರಾಗಲಿದೆ. ಶುಭದಿನ 05. ಈಶ್ವರನಿಗೆ ತಿಲಾರ್ಚನೆ ಮಾಡಿರಿ.




ಗೌರವ ಸನ್ಮಾನ ಪಡೆಯುವ ಅವಕಾಶ ಇದೆ. ಹಣಕಾಸು ಹೂಡಿಕೆಯಲ್ಲಿ ನಿರೀಕ್ಷಿತ ಯಶಸ್ಸು ಪಡೆಯಲಿದ್ದೀರಿ. ಪ್ರತಿಸ್ಪರ್ಧಿಗಳ ವಿರುದ್ಧ ಮೇಲುಗೈ ಸಾಧಿಸಲಿದ್ದೀರಿ. ಆರೋಗ್ಯದಲ್ಲಿ ಸ್ವಲ್ಪಮಟ್ಟಿಗೆ ಏರುಪೇರಾಗಲಿದೆ. ಆಹಾರ, ನೀರು ಸೇವನೆಯ ಬಗ್ಗೆ ಎಚ್ಚರ ಇರಲಿ. ವಾರದ ಮಧ್ಯ ಭಾಗದಲ್ಲಿ ವೈಯಕ್ತಿಕ ಬದುಕಿಗೆ ಸಂಬಂಧಪಟ್ಟಂತೆ ಶುಭ ಸುದ್ದಿ ಕೇಳಲಿದ್ದೀರಿ. ಶುಭದಿನ 01. ಶ್ರೀ ವೆಂಕಟೇಶ್ವರ ಸ್ತೋತ್ರ ಪಠಿಸಿರಿ.




ವಿವಿಧ ಕ್ಷೇತ್ರಗಳಲ್ಲಿ ಪ್ರಗತಿ ಪಡೆಯಲಿದ್ದೀರಿ. ಸ್ಪರ್ಧಾತ್ಮಕ, ಕ್ರೀಡಾ ಕ್ಷೇತ್ರದಲ್ಲಿ ತೊಡಗಿಕೊಂಡವರಿಗೆ ಯಶಸ್ಸು ಪಡೆಯುವ ಯೋಗ ಇದೆ. ಆರೋಗ್ಯವು ಉತ್ತಮವಾಗಿ ಇರುವುದರಿಂದ ಉತ್ಸಾಹದಿಂದ ಕಾಣಿಸಿಕೊಳ್ಳಲಿದ್ದೀರಿ. ವೈಯಕ್ತಿಕ ಬದುಕು ಸಂತುಷ್ಟವಾಗಿರುತ್ತದೆ. ಪ್ರೀತಿಪಾತ್ರರ ಜತೆಗೆ ಮನರಂಜನೆಗೆ, ಫ್ಯಾಷನ್ ವಸ್ತುಗಳ ಖರೀದಿಗೆ ಸಮಯ ಕಳೆಯಲಿದ್ದೀರಿ. ಶುಭದಿನ 03. ಲಿಂಗಾಷ್ಟಕ ಓದಿರಿ.




ವೈಯಕ್ತಿಕ ಬದುಕು ಉತ್ತಮವಾಗಲಿದೆ. ಶಿಕ್ಷಣ ಕ್ಷೇತ್ರದಲ್ಲಿ ಇರುವವರಿಗೆ ಪ್ರಗತಿ ಕಾಣುವ ಸಮಯ. ಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುವವರಿಗೆ ಸೇವೆ ಕಾಯಂ ಸಂಭವ. ಗೃಹ ನಿರ್ಮಾಣ ವಿಚಾರದಲ್ಲಿ ಪ್ರಗತಿ ಆಗಲಿದೆ. ಮನೆಯ ಹಿರಿಯರು ಮೆಚ್ಚುಗೆ ಸೂಚಿಸಲಿದ್ದಾರೆ. ಸಂಸ್ಕೃತಿ, ಮನರಂಜನೆ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಲು ಅವಕಾಶ ದೊರೆಯಲಿದೆ. ಶುಭದಿನ 06. ಹನುಮಾನ್ ಚಾಲಿಸ್ ಓದಿರಿ.




ಮೆಚ್ಚುಗೆ, ಬಡ್ತಿ ದೊರೆಯುವ ಸಮಯ ಇದು. ರಾಜಕಾರಣ ಅಥವಾ ಸಮಾಜ ಸೇವಾ ಕ್ಷೇತ್ರದಲ್ಲಿ ಇರುವವರಿಗೆ ಮನ್ನಣೆ ಸಿಗಲಿದೆ. ಮನೆಯಲ್ಲಿ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜನೆ ಮಾಡುವ ಸಾಧ್ಯತೆ ಇದೆ. ಮನರಂಜನೆ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸಲು ಬಯಸುವವರಿಗೆ ಅವಕಾಶ ದೊರೆಯಲಿದೆ. ಹಣಕಾಸಿನ ಹರಿವು ಉತ್ತಮವಾಗಿರುತ್ತದೆ. ಶುಭದಿನ 02. ನವದುರ್ಗಾ ಆರಾಧನೆ ಮಾಡಿರಿ.




ಪಿತ್ರಾರ್ಜಿತವಾದ ಆಸ್ತಿ ವ್ಯವಹಾರಗಳು ನೀವು ಅಂದುಕೊಂಡಂತೆ ನಡೆಯುತ್ತವೆ. ವ್ಯವಹಾರದಲ್ಲಿ ಲಾಭ ಗಳಿಸಲಿದ್ದೀರಿ. ವ್ಯಾಜ್ಯಗಳಿದ್ದಲ್ಲಿ ಪರಿಹಾರ ದೊರೆಯಲಿದೆ. ವಾರದ ದ್ವಿತೀಯಾರ್ಧದಲ್ಲಿ ಹಲವು ರೀತಿಯಲ್ಲಿ ಅವಕಾಶಗಳು ನಿಮಗೆ ದೊರೆಯಲಿವೆ. ರಾಜಕಾರಣ ಹಾಗೂ ನಾಯಕತ್ವ ಸ್ಥಾನದಲ್ಲಿ ಇರುವವರಿಗೆ ಇನ್ನಷ್ಟು ಪ್ರಾಮುಖ್ಯ ದೊರೆಯಲಿದೆ. ಶುಭದಿನ 03. ಚಂಡಿಪಾರಾಯಣ ಮಾಡಿರಿ.




ಮನೆಯಲ್ಲಿ ಪ್ರಶಾಂತವಾದ ವಾತಾವರಣ ಇರುತ್ತದೆ. ಸೇವಾ ವಲಯ, ಕ್ರಿಯಾತ್ಮಕ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರಿಗೆ ತಮ್ಮ ಕೌಶಲ ಹೆಚ್ಚಿಸಿಕೊಳ್ಳಲು ಹಲವು ಬಗೆಯಲ್ಲಿ ಅವಕಾಶಗಳು ದೊರೆಯಲಿವೆ. ಪ್ರೀತಿಪಾತ್ರರ ಜತೆಗೆ ಮನರಂಜನೆ ಕಾರ್ಯಕ್ರಮಗಳಲ್ಲಿ ಭಾಗಿಯಾಗಲಿದ್ದೀರಿ. ಶಾಪಿಂಗ್‌ಗಾಗಿ ಖರ್ಚು ಮಾಡಲಿದ್ದೀರಿ. ಶುಭದಿನ 04. ಸೌಂದರ್ಯ ಲಹರಿ ಪಠಿಸಿರಿ.




ಕಾನೂನು ವ್ಯಾಜ್ಯಗಳಿದ್ದಲ್ಲಿ ನಿಮ್ಮ ಪರವಾಗಿ ತೀರ್ಪು ಬರುವ ಸಾಧ್ಯತೆಗಳು ಹೆಚ್ಚಿವೆ. ಬಹಳ ಕಾಲದಿಂದ ಬಾಕಿ ಉಳಿದಿದ್ದ ಕೆಲಸಕ್ಕೆ ಸಂಬಂಧಿಸಿದ ನಿರ್ಧಾರ, ಅನುಷ್ಠಾನ ಆಗಲಿದೆ. ಮೇಲಧಿಕಾರಿಗಳಿಂದ ನಿರೀಕ್ಷಿತ ಮಟ್ಟದ ಪ್ರೋತ್ಸಾಹ ಬೆಂಬಲ ದೊರೆಯಲಿದೆ. ಆರೋಗ್ಯದ ಬಗ್ಗೆ ನಿಯಮಿತವಾದ ಕಾಳಜಿ ತೆಗೆದುಕೊಳ್ಳುವುದು ಅತ್ಯಗತ್ಯ. ಶುಭ ಸುದ್ದಿಯನ್ನು ಕೇಳಲಿದ್ದೀರಿ. ಶುಭದಿನ 05. ವಿಷ್ಣು ಸಹಸ್ರನಾಮ ಪಠಿಸಿರಿ.